ಅ) ಹಾಗಿದ್ದಲ್ಲಿ, ತಾಲ್ಲೂಕಿನಲ್ಲಿ ಜವಳು ಆದ ಹಾಗೂ ಸವಳು ಆದ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ? (ಎಕರೆವಾರು ವಿವರ ತಿಳಿಸಬೇಕಾಗಿ ವಿನಂತಿ).

ಇ) ಈ ಸವಳು ಜವಳು ಆದ ಜಮೀನುಗಳ ಸುಧಾರಣೆಯ ಸಲುವಾಗಿ ಯಾವ ಕಾರ್ಯಕ್ರಮಂ ತೆಗೆದುಕೊಳ್ಳಲಾಗಿದೆ, ಹಾಗೂ ಸದರಿ ಕೆಲಸಕ್ಕೆ ಖರ್ಚಾದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಜವುಳಾದ ಪ್ರದೇಶ — ೨,೫೮೭ ಎಕರೆಗಳು.

ಸವುಳಾದ ಪ್ರದೇಶ — ೧೫೦ ಎಕರೆಗಳು.

ಇ) ನೀರು ಸರಿಯಾಗಿ ಹರಿದು ಹೋಗುವಂತೆ ಬನಿಕಾಲುವೆಗಳನ್ನು ನಿರ್ಮಿಸಿ, ಸಾಗುವಳಿಗೆ ಜಮೀನನ್ನು ಯೋಗ್ಯಗೊಳಿಸಲು ಕ್ರಮಂ ಕೈಗೊಳ್ಳಲಾಗುತ್ತಿದೆ.

ಆಗಿರುವ ವೆಚ್ಚ (ಫೆಬ್ರುವರಿ, ೧೯೮೮ ರವರೆಗೆ) -ರೆ.೩೪,೩೫೨ ರೂಪಾಯಿಗಳು.

ಚುಂಚನೂರು ಹಾಗೂ ಉಜ್ಜನಕೊಪ್ಪ ನಡುವೆ ಹಳ್ಳಕ್ಕೆ ಸೇತುವೆ ಕಟ್ಟುವ ಬಗ್ಗೆ.

೧೨೭೪. ಶ್ರೀ ಫಕೀರಪ್ಪ ಅಲ್ಲಿಪ್ಪ, (ರಾಮದುರ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಮದುರ್ಗ ತಾಲ್ಲೂಕಿನಲ್ಲಿ ಉಜ್ಜನಕೊಪ್ಪ ಗ್ರಾಮದ ಚುಂಚನೂರ ಹಾಗೂ ಉಜ್ಜನಕೊಪ್ಪ ನಡುವೆ ಇರುವ ಹಳ್ಳಕ್ಕೆ ಸೇತುವೆಯನ್ನು ಕಟ್ಟುವ ಬಗ್ಗೆ ಸಂಬಂಧಪಟ್ಟವರಿಗೆ ಹಲವಾರು ಅರ್ಜಿಗಳನ್ನು ಸಲ್ಲಿಸಿದ್ದರೂ ಕೂಡ ಇದರ ಬಗ್ಗೆ ಯಾವ ಕ್ರಮವನ್ನು ಕೈಕೊಳ್ಳದಿರಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು.)

ಅ) ಈ ಸೇತುವೆಯಂ ಲೋಕೋಪಯೋಗಿ ಇಲಾಖೆಗೆ ಸೇರದ ಇರುವ ರಸ್ತೆಯ ಮೇಲೆ ಕಟ್ಟಬೇಕಾಗಿದ್ದು ಸುಮಾರು ೫ ಲಕ್ಷ ರೂ. ಗಳು ತಗಲಂತ್ತದೆ. ಆದ್ದರಿಂದ ಹಣದ ಲಭ್ಯತೆಗನು ಗುಣವಾಗಿ ಈ ಕೆಲಸವನ್ನು ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಅರಣ್ಯ ಕಾಲೇಜುಂ ಸ್ಥಾಪನೆ ಬಗ್ಗೆ.

೧೧೪೨. ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರಾಜ್ಯ ಅರಣ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಅರಣ್ಯ ಸಂಪತ್ತಿನಲ್ಲಿ ಪ್ರಧಾನವಾಗಿ ರಾಜ್ಯ ಎಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇಲ್ಲಿ ಅರಣ್ಯ ಕಾಲೇಜು ಸ್ಥಾಪಿಸುವುದು ಅವಶ್ಯವಿದೆ ಎಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ರಾಜ್ಯ ಅರಣ್ಯ ಸಚಿವರು).—

ಅ) ಹೌದು.

ಆ) ಅಂಥಹ ಪ್ರಸ್ತಾಪವು ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.